

ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ

### ಉಜ್ವಲ ಭವಿಷ್ಯದತ್ತ 'ಸನ್‌ರೈಸ್ ಕ್ಯಾಂಡಲ್'

'ಮಹಾಲಕ್ಷ್ಮಿ ಡೈಸ್'ನಿಂದ ಭಾವೇಶ್ ಅವರಿಗೆ ಅಚ್ಚುಗಳು ಬಹಳ ಕಡಿಮೆ ಬೆಲೆಗೆ ಸಿಗುತ್ತಿದ್ದವು. ಅವರುಗಳು ಪರಸ್ಪರರ ಹಿತವನ್ನು ಕಾಯುವ ಮಿತ್ರರಾದರು. ಭಾವೇಶ್ ರಬ್ಬರಿನ ಅಚ್ಚುಗಳ ಉಪಯೋಗವನ್ನು ಕಂಡುಕೊಂಡರು. ಕ್ಲಿಷ್ಟವಾದ ಆಕಾರಗಳನ್ನೂ ರಬ್ಬರಿನ ಅಚ್ಚುಗಳಲ್ಲಿ ತಯಾರಿಸಬಹುದಿತ್ತು.

ಆ ದಿನಗಳಲ್ಲಿ ಭಾವೇಶ್ ಅವರ ಪೂರ್ತಿ ಗಮನ ಸೀಸನಲ್ ಕ್ಯಾಂಡಲ್ಸ್ ಮೇಲೆ ಇತ್ತು. ಬಾಲ್ಯದ ಗೆಳೆಯ ಜಯದೀಪ್ ನೆನಪಾದರು. ಆತನೂ ಹೀಗೆಯೇ ಸಾಂತಾ ಕ್ಲಾಸ್, ಗಣಪತಿ ಬಪ್ಪ, ಟೆಡ್ಡಿ ಬೇರ್, ಕ್ರಿಸ್ಮಸ್ ಟ್ರೀ ಮುಂತಾದ ಆಕಾರದ ಮೋಂಬತ್ತಿಗಳನ್ನು ಕೊಂಡು ತರುತ್ತಿದ್ದ. ಈಗ ಭಾವೇಶ್ ಆ ಆಕಾರಗಳ ಅಚ್ಚುಗಳನ್ನು ಹುಡುಕತೊಡಗಿದರು. ಮಹಾಲಕ್ಷ್ಮಿ ಡೈಸ್ ಅಂಗಡಿ ಇವರಿಗೆ ಬಹಳಷ್ಟು ಸಹಾಯ ಮಾಡಿತು. ಐದಾರು ತಿಂಗಳಲ್ಲಿ ಭಾವೇಶ್ ಸ್ವತಃ ಸೀಸನಲ್ ಅಚ್ಚುಗಳನ್ನು ತಯಾರಿಸುವ ಕ್ಷಮತೆಯನ್ನು ಗಳಿಸಿದರು. ಮತ್ತುಳಿದ ಸೂಕ್ಷ್ಮಗಳನ್ನು ಕೆಲಸವೇ ಕಲಿಸುತ್ತಾ ಹೋಯಿತು. ಉದಾಹರಣೆಗೆ ರಬ್ಬರಿನ ಅಚ್ಚುಗಳನ್ನು ಲೂಬ್ರಿಕೇಟ್ ಮಾಡುವ ರೀತಿಯನ್ನು ಪ್ರಯೋಗಗಳ ಮೂಲಕ ಸುಧಾರಿಸುತ್ತಾ ಹೋದರು. ಯಾವ ಬತ್ತಿ ದಾರವನ್ನು, ಯಾವ ವ್ಯಾಸದ ಮೋಂಬತ್ತಿಯೊಳಗೆ ಅಳವಡಿಸಬೇಕು ಎನ್ನುವುದನ್ನು ತಿಳಿದಿದ್ದರು. ಮೇಣದಲ್ಲಿ ಬಣ್ಣ ಮತ್ತು ಪರಿಮಳವನ್ನು ಬೆರೆಸುವುದು ಹೇಗೆ, ಎಷ್ಟು ತಾಪಮಾನದಲ್ಲಿ ಕರಗಿದ ಮೇಣವನ್ನು ಅಚ್ಚಿನಲ್ಲಿ ಸುರಿಯಬೇಕು, ಯಾವಾಗ ಅದರ ಬಾಯಿ ಮುಚ್ಚಿ ಸೀಲ್ ಮಾಡಬೇಕು, ಪ್ಯಾಕಿಂಗ್ ತಯಾರಿಸುವುದು ಹೇಗೆ ಮುಂತಾದ ಜಟಿಲ ವಿಷಯಗಳೆಲ್ಲ ಈಗ ಭಾವೇಶ್ ಅವರಿಗೆ ಸುಲಭ ಸಾಧ್ಯವಾಗಿದ್ದವು. ತಮ್ಮ ಉದ್ಯಮಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಅರಿಯುವುದು, ಕಲಿಯುತ್ತಲೇ ಹೋಗುವುದು ಅವರ ಬಲು ದೊಡ್ಡ ಸಕಾರಾತ್ಮಕ ಗುಣವಾಗಿತ್ತು.

ಅಧ್ಯಾಯ 9

### ಹೃದಯಗಳ ಜೋಡಿಸಿ

ಆರಂಭದ ದಿನಗಳಲ್ಲಿ ಮೋಂಬತ್ತಿಗಳನ್ನು ಬರಿದಾಗಿಯೇ ಮಾರುತ್ತಿದ್ದರು. ಅವುಗಳ ಮೇಲೆ ಯಾವುದೇ ಕವಚ ಇರುತ್ತಿರಲಿಲ್ಲ. ಪರಿಮಳದ ಮೋಂಬತ್ತಿಗಳನ್ನೂ ಹೀಗೇ ತೆರೆದ ರೀತಿಯಲ್ಲಿ ಮಾರಾಟ ಮಾಡುತ್ತಿದ್ದರು. ನೂರುಇನ್ನೂರು ಪರಿಮಳದ ಮೋಂಬತ್ತಿಗಳು ಆ ಚಿಕ್ಕ ಕೈಗಾಡಿಯಲ್ಲಿ ಹೀಗೇ ತೆರೆದು ಇಟ್ಟಿರುತ್ತಿದ್ದರು. ಸಂಜೆ ಮಾರ್ಕೆಟ್‌ನಲ್ಲಿ ಎಲ್ಲಿಲ್ಲದ ಜನಸಂದಣಿ ಇರುತ್ತಿತ್ತು. ಈ ಮೋಂಬತ್ತಿಗಳ ಪರಿಮಳ ಸುತ್ತಲೂ ಪಸರಿಸಿ ತನ್ನ ಕೆಲಸ ಮಾಡುತ್ತಿತ್ತು. ಸಾವಿರಾರು ಅಗರಬತ್ತಿಯನ್ನು ಹಚ್ಚಿ ಇಟ್ಟಂತೆ ಹರಡಿದ ಪರಿಮಳವದು. ಈ ಪರಿಮಳ ಎಲ್ಲೋ ಏನನ್ನೋ ಕೊಳ್ಳುತ್ತಿದ್ದ ಗ್ರಾಹಕರನ್ನೂ ಇವರ ಕೈಗಾಡಿಗೆ ಸೆಳೆದು ತರುತ್ತಿತ್ತು. ಇವರ ಮಾರಾಟ ಜೋರಾಗುತ್ತಿತ್ತು. ಇವರ ಸ್ಟಾಲ್‌ನಲ್ಲಿ ಜನ ಸೇರಿದಂತೆ, ಅಗಲು ಬಗಲಿನ ಬೀದಿ ವ್ಯಾಪಾರಿಗಳಿಗೆ ಒಂದಿಷ್ಟು ತೊಂದರೆ ಆಗುತ್ತಿತ್ತು. ಸಿಟ್ಟೂ ಬರುತ್ತಿತ್ತು. ಇವರೊಂದಿಗೆ ಜಗಳ ಆಡಲು ಅವರಿಗೆ ಮತ್ತೊಂದು ಕಾರಣ ಸಿಗುತ್ತಿತ್ತು. ಅದರೆಲ್ಲ ಪರಿಣಾಮಗಳನ್ನು ಭಾವೇಶ್ ಭರಿಸುತ್ತಲೇ ಹೋದರು. ಆ ದಿನ ಅವರಿಗೊಂದು ಶಾಯರಿ ನೆನಪಾಗಿತ್ತು:

ಮಾಂಝೀ ತೇರೀ ಕಷ್ತೀ ಕೆ ತರಫ್ದಾರ್ ಬಹುತ್ ಹೈ
ಇಸ್ ಪಾರ್ ಭಲೆ ಕಮ್ ಹೋ ಲೇಕಿನ್ ಉಸ್ ಪಾರ್ ಬಹುತ್ ಹೈ
ಹಮನೆ ತೋ ವಹಾ ಜಾಕರ್ ಲಗಾ ದೀ ಅಪನೀ ಕಾಂಚ್ ಕೀ ದುಕಾನ್
ಜಿಸ್ ಶಹರ್ ಮೆ ಪತ್ಥರ್ ಕೆ ಖರೀದ್ದಾರ್ ಬಹುತ್ ಹೈ